ಫ್ಯಾಕ್ಸ್ : 080 – 2202 8041 ದೂರವಾಣಿ : 080 – 2202 8032

# ಕರ್ನಾಟಕ ಸರ್ಕಾರ

## ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಸಾಸಂಇ : ಉ ನಿ : ಸುಮಪ : 2014–15 : ದಿನಾಂಕ: 5–11–2014

## ಪತ್ರಿಕಾ ಆಮಂತ್ರಣ

| ಕ್ರಮ ಸಂಖ್ಯೆ | ಕಾರ್ಯಕ್ರಮಗಳ ವಿವರ | ದಿನಾಂಕ ಸಮಯ | ಕಾರ್ಯಕ್ರಮ ನಡೆಯುವ ಸ್ಥಳ |
|---|---|---|---|
| 1 | ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ವತಿಯಿಂದ "ಏಕಲವ್ಯ, ಜೀವಮಾನ ಸಾಧನೆ ಮತ್ತು ಕರ್ನಾಟಕ ಕ್ರೀಡಾರತ್ನ ಪ್ರಶಸ್ತಿಗಳು – 2013" ಪ್ರಶಸ್ತಿ ಪ್ರದಾನ ಸಮಾರಂಭ:<br><br>ಪ್ರಶಸ್ತಿ ಪ್ರದಾನ:<br><br>ಶ್ರೀ ಸಿದ್ದರಾಮಯ್ಯ,<br>ಸನ್ಮಾನ್ಯ ಮುಖ್ಯಮಂತ್ರಿಗಳು,<br>ಕರ್ನಾಟಕ ಸರ್ಕಾರ<br><br>ಅಭಿನಂದನಾ ಭಾಷಣ:<br><br>ಶ್ರೀ ಕೆ. ಅಭಯ್ ಚಂದ್ರ,<br>ಯುವಜನ ಸೇವೆ ಮತ್ತು ಮೀನುಗಾರಿಕಾ ಖಾತೆ ರಾಜ್ಯ ಸಚಿವರು.<br><br>ಸಾಧನಾ ಸಂಚಿಕೆ ಬಿಡುಗಡೆ:<br><br>ಶ್ರೀ ರಾಮಲಿಂಗಾ ರೆಡ್ಡಿ,<br>ಸಾರಿಗೆ ಸಚಿವರು. | 06–11–2014<br>ಗುರುವಾರ<br>ಸಂಜೆ<br>5–30 ಗಂಟೆಗೆ | ಬ್ಯಾಂಕ್ವೆಟ್ ಹಾಲ್,<br>ವಿಧಾನಸೌಧ,<br>ಬೆಂಗಳೂರು. |

| | | | |
|---|---|---|---|
| | **<u>ಅಧ್ಯಕ್ಷತೆ:</u>**<br><br>**ಶ್ರೀ ಆರ್. ರೋಷನ್ ಬೇಗ್,**<br>**ಮೂಲಸೌಕರ್ಯ ಅಭಿವೃದ್ಧಿ, ಹಜ್, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಸಚಿವರು**<br><br>**<u>ವಿಶೇಷ ಆಹ್ವಾನಿತರು:</u>**<br><br>**ಶ್ರೀ ಕೆ. ಗೋವಿಂದರಾಜ್,**<br>**ವಿಧಾನ ಪರಿಷತ್ ಸದಸ್ಯರು ಹಾಗೂ ಅಧ್ಯಕ್ಷರು,**<br>**ಕರ್ನಾಟಕ ಒಲಂಪಿಕ್ ಸಂಸ್ಥೆ, ಬೆಂಗಳೂರು.** | | |

ನಿರ್ದೇಶಕರ ಪರವಾಗಿ

## <u>ವಾರ್ತಾ ವಿಶೇಷ:</u>

# “ಮಹಿಳಾ ವಿಶೇಷ ಚಿಕಿತ್ಸಾ ಘಟಕ”

ಮಹಿಳೆಯರು ಹೆಚ್ಚಾಗಿ ಅತ್ಯಾಚಾರ, ಲೈಂಗಿಕ ದೌರ್ಜನ್ಯ, ವರದಕ್ಷಿಣೆ ಕಿರುಕುಳ, ಕೌಟುಂಬಿಕ ದೌರ್ಜನ್ಯ, ಹೀಗೆ ಹಲವಾರು ರೀತಿಯ ದೌರ್ಜನ್ಯಗಳಿಗೆ ಒಳಗಾಗುತ್ತಿದ್ದಾರೆ. ದೌರ್ಜನ್ಯಕ್ಕೊಳಗಾದ ಮಹಿಳೆಯರು ಚಿಕಿತ್ಸೆ ಪಡೆಯಲು ಹಾಗೂ ನ್ಯಾಯ ಪಡೆಯಲು ಬೇರೆ ಬೇರೆ ಸ್ಥಳಗಳಿಗೆ ಹೋಗಲು ತೊಂದರೆ ಮತ್ತು ಮುಜುಗರ ಅನುಭವಿಸುತ್ತಿರುವುದಲ್ಲದೆ, ಈ ರೀತಿಯ ವಿಳಂಬದಿಂದ ಪ್ರಮುಖ ಸಾಕ್ಷ್ಯಗಳು ನಾಶವಾಗುವ ಸಂಭವ ಹೆಚ್ಚಾಗಿರುತ್ತದೆ. ಒಂದೇ ಸೂರಿನಡಿ ವೈದ್ಯಕೀಯ ಚಿಕಿತ್ಸೆ ಪೊಲೀಸರಿಂದ ಪ್ರಥಮ ವರ್ತಮಾನ ವರದಿ ದಾಖಲು, ಕಾನೂನು ನೆರವು ಹಾಗೂ ಮಾನಸಿಕ ಸ್ಥೈರ್ಯ ಮತ್ತು ಪುನರ್ವಸತಿ ಕುರಿತ ಆಪ್ತ ಸಮಾಲೋಚನೆ ನೀಡುವುದರಿಂದ ದೌರ್ಜನ್ಯಕ್ಕೆ ಒಳಗಾದ ನೊಂದ ಮಹಿಳೆಯರಿಗೆ ಅಗಾಧ ನೆರವು ನೀಡಿದಂತಾಗುವುದು.

2014-15 ಸಾಲಿನ ಆಯವ್ಯಯ ಭಾಷಣದಲ್ಲಿ ಮುಖ್ಯಮಂತ್ರಿಗಳು ಘೋಷಿಸಿರುವಂತೆ ದೌರ್ಜನ್ಯಕ್ಕೊಳಗಾದ ಮಹಿಳೆಯರಿಗೆ ಶೀಘ್ರ ನೆರವನ್ನು ಒಂದೇ ಸೂರಿನಡಿ ಒದಗಿಸುವ ಉದ್ದೇಶದಿಂದ “ಮಹಿಳಾ ವಿಶೇಷ ಚಿಕಿತ್ಸಾ ಘಟಕ” ಗಳನ್ನು ಜಿಲ್ಲೆಗೆ ಒಂದರಂತೆ ಜಿಲ್ಲಾ ಆಸ್ಪತ್ರೆಗಳಲ್ಲಿ ಹಾಗೂ ಬೆಂಗಳೂರಿನ ಐದು ಆಸ್ಪತ್ರೆಗಳಲ್ಲಿ ಸ್ಥಾಪಿಸಲಾಗುತ್ತಿದೆ.

ಬೆಂಗಳೂರಿನ ಬೌರಿಂಗ್ ಮತ್ತು ಲೇಡಿ ಕರ್ಜನ್ ಆಸ್ಪತ್ರೆ, ಕೆ.ಸಿ. ಜನರಲ್ ಆಸ್ಪತ್ರೆ ಹಾಗೂ ವಾಣಿ ವಿಲಾಸ ಆಸ್ಪತ್ರಗಳಲ್ಲಿ ಮಹಿಳೆಯರ ವಿಶೇಷ ಚಿಕಿತ್ಸಾ ಘಟಕಗಳನ್ನು ಪ್ರಾರಂಭಿಸಲಾಗುತ್ತಿದೆ.

ದೌರ್ಜನ್ಯಕ್ಕೊಳಗಾದ ಮಹಿಳೆಯರಿಗೆ ವೈದ್ಯಕೀಯ ಚಿಕಿತ್ಸೆ, ಪೊಲೀಸ್ ನೆರವು, ಕಾನೂನು ನೆರವು, ಸಮಾಲೋಚನೆ, ರಕ್ಷಣೆ, ಮುಂತಾದ ಸೇವೆಗಳನ್ನು ಒಂದೇ ಸೂರಿನಡಿ ವಿವಿಧ ಇಲಾಖೆಗಳ

ಸಹಯೋಗದೊಂದಿಗೆ ನೊಂದ ಮಹಿಳೆಯರಿಗೆ ಪುನರ್ವಸತಿ ಕಲ್ಪಿಸುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿರುತ್ತದೆ.

ಪ್ರತಿ ಘಟಕದಲ್ಲಿ 2–3 ಕೊಠಡಿಗಳು ಶೌಚಾಲಯ ವ್ಯವಸ್ಥೆಯೊಂದಿಗೆ 2 ರಿಂದ 4 ಹಾಸಿಗೆಗಳನ್ನೊಳಗೊಂಡಿರುತ್ತದೆ. ವೈದ್ಯಕೀಯ ಚಿಕಿತ್ಸಾ ಕೊಠಡಿ, ಆಪ್ತ ಸಮಾಲೋಚನಾ ಕೊಠಡಿ, ಪೊಲೀಸ್ ಅಧಿಕಾರಿಗಳು ಮತ್ತು ವಕೀಲರಿಗೆ ಪ್ರತ್ಯೇಕವಾದ ಕೊಠಡಿ ಹಾಗೂ ಮಹಿಳಾ ಸಹಾಯವಾಣಿ ಇರುತ್ತದೆ. ಘಟಕವು ದಿನದ 24 ಗಂಟೆಗಳೂ ಕಾರ್ಯನಿರ್ವಹಿಸುತ್ತವೆ. ಉಚಿತ ಮಹಿಳಾ ಸಹಾಯವಾಣಿ 181 ಸೌಲಭ್ಯ 24X7 ಸದಾ ಲಭ್ಯವಿರುತ್ತದೆ. ಆಸ್ಪತ್ರೆಯ ಹಿರಿಯ ವೈದ್ಯಾಧಿಕಾರಿಗಳು ಈ ಕೇಂದ್ರದ ಸಂಯೋಜಕರಾಗಿರುತ್ತಾರೆ.

## ಘಟಕದಲ್ಲಿ ದೊರೆಯುವ ಸೇವೆಗಳು:

- ವೈದ್ಯಕೀಯ ಪರೀಕ್ಷೆ ಮತ್ತು ಚಿಕಿತ್ಸೆ
- ಪ್ರಥಮ ವರ್ತಮಾನ ವರದಿ (ಎಫ್.ಐ.ಆರ್.) ದಾಖಲು
- ಆಪ್ತ ಸಮಾಲೋಚನೆ
- ಕಾನೂನು ಸಲಹೆ ಮತ್ತು ನೆರವು
- ಸುರಕ್ಷಿತ ವಸತಿ ಸೌಲಭ್ಯ
- ಉಚಿತ ಮಹಿಳಾ ಸಹಾಯವಾಣಿ 181

## ಘಟಕ ಕರ್ತವ್ಯಗಳು:

1. ಸಹಾಯವಾಣಿ 181 ರಿಂದ ನೊಂದ ಮಹಿಳೆಯರಿಂದ ಕರೆ ಸ್ವೀಕಾರ ಹಾಗೂ ಈ ಕರೆಗಳನ್ನು ದಾಖಲಿಸುವುದು.
2. ವೈದ್ಯಾಧಿಕಾರಿಗಳಿಂದ ಮಹಿಳೆಯರಿಗೆ ವೈದ್ಯಕೀಯ ಪರೀಕ್ಷೆ ಹಾಗೂ ಚಿಕಿತ್ಸೆ ಒದಗಿಸುವುದು.
3. ನುರಿತ ಸಮಾಲೋಚಕರಿಂದ ಅಗತ್ಯ ಸಮಾಲೋಚನೆ ಒದಗಿಸುವುದು.
4. ಇನ್‌ಸ್ಪೆಕ್ಟರ್ ದರ್ಜೆಯ ಮಹಿಳಾ ಪೊಲೀಸ್ ಅಧಿಕಾರಿಯಿಂದ ಎಫ್.ಐ.ಆರ್. ದಾಖಲು ಹಾಗೂ ಸಂಬಂಧಪಟ್ಟ ಪೊಲೀಸ್ ಠಾಣೆಗೆ ವರ್ಗಾವಣೆ.
5. ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದಿಂದ ನೇಮಿಸಲ್ಪಟ್ಟ ಕಾನೂನು ಸಲಹೆಗಾರರಿಂದ ಅಗತ್ಯ ಕಾನೂನು ನೆರವು ಒದಗಿಸುವುದು.
6. ಸರ್ಕಾರದಿಂದ ಗುರುತಿಸಲ್ಪಟ್ಟ ಸ್ವಯಂ ಸೇವಾ ಸಂಸ್ಥೆಗಳು/ಸರ್ಕಾರಿ ಗೃಹಗಳಲ್ಲಿ ಮಹಿಳೆಯರಿಗೆ ಆಶ್ರಯ ಮತ್ತು ರಕ್ಷಣೆಯನ್ನು ಒದಗಿಸುವುದು.

## ಫಲಾನುಭವಿಗಳು

- ಕೌಟುಂಬಿಕ ದೌರ್ಜನ್ಯ ಮತ್ತು ಇತರೆ ಲೈಂಗಿಕ ಅಥವಾ ದೈಹಿಕ ಹಿಂಸೆಗೆ ಒಳಗಾದ ಮಹಿಳೆಯರು/ಹೆಣ್ಣು ಮಕ್ಕಳು ಮತ್ತು ಬಾಲಕಿಯರು. ವೈದ್ಯಕೀಯ ಪರೀಕ್ಷೆ, ಚಿಕಿತ್ಸೆ ಹಾಗೂ ಸಮಾಲೋಚನೆಯನ್ನು ಗೌಪ್ಯವಾಗಿ ಮತ್ತು ಸುರಕ್ಷಿತ ವಾತಾವರಣದಲ್ಲಿ ಯಾರ ಉಪಸ್ಥಿತಿ ಅವಶ್ಯಕತೆ ಇದೆಯೋ ಅಂತಹ ವ್ಯಕ್ತಿಗಳು ಹಾಗೂ ದೌರ್ಜನ್ಯಕ್ಕೊಳಗಾದ ಮಹಿಳೆಯರು ಇಚ್ಛಿಸಿದ ಕುಟುಂಬದ ಸದಸ್ಯರ ಸಮಕ್ಷಮದಲ್ಲಿ ನೀಡಲಾಗುವುದು.

**ಫಲಶೃತಿ:**

- ಘಟಕದಲ್ಲಿ 24X7 ಗಂಟೆಗಳೂ ಸಿಬ್ಬಂದಿಗಳು ಹಾಜರಿದ್ದು, ದೌರ್ಜನ್ಯಕ್ಕೊಳಗಾದ ಮಹಿಳೆಯರಿಗೆ ಎಲ್ಲಾ ಅಗತ್ಯ ಸೇವೆಗಳು ಒಂದೇ ಸೂರಿನಲ್ಲಿ ಸಿಗುತ್ತದೆ.
- ನೊಂದ ಮಹಿಳೆಯ ಪ್ರಕರಣ ದಾಖಲಿಸುವಾಗ ಮತ್ತೊಮ್ಮೆ ಹಿಂಸೆ ಅಥವಾ ಮುಜುಗರ ಪಡುವಂತಹ ಪ್ರಸಂಗಗಳನ್ನು ತಡೆಗಟ್ಟಬಹುದು.
- ನೊಂದ ಮಹಿಳೆಯರಿಗೆ ಯಾವುದೇ ಭೇದಭಾವವಿಲ್ಲದೆ ಉಚಿತವಾಗಿ ಘಟಕದಲ್ಲಿ ಸೌಲಭ್ಯಗಳು ನೀಡಲಾಗುವುದು ಹಾಗೂ ವೈದ್ಯಕೀಯ, ಕಾನೂನು ಮತ್ತು ಮಾನಸಿಕ ಸಮಾಲೋಚನೆಯನ್ನು ಒಳಗೊಂಡಂತಹ ಪುನರ್ವಸತಿ ಸೌಲಭ್ಯಗಳು ಶೀಘ್ರದಲ್ಲಿ ದೊರೆಯುವುದು.

ಸಮ:ಬಾಬು:ಜಿಪಿಆರ್.

## ರಾಜ್ಯ ಕೃಷಿ ಮಾರಾಟ ಮಂಡಳಿಯಲ್ಲಿ ರಾಜ್ಯೋತ್ಸವ

**ಬೆಂಗಳೂರು, ನವೆಂಬರ್ 5 (ಕರ್ನಾಟಕ ವಾರ್ತೆ)**

ದಿನಾಂಕ01.11.2014ರಂದು ಕೃಷಿ ಮಾರಾಟ ಇಲಾಖೆ , ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಂಡಳಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳ ಸೃಷ್ಠಿ ಕನ್ನಡ ಸಂಘದ ಸಹಯೋಗದೊಂದಿಗೆ 59ನೇ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮವು ಅದ್ದೂರಿಯಾಗಿ ಜರುಗಿತು. ನಿತ್ಯೋತ್ಸವ ಕವಿ ಪ್ರೊ. ಶ್ರೀ ನಿಸಾರ್ ಅಹ್ಮದ್ ಹಾಗೂ ಸಾಹಿತಿಗಳಾದ ಶ್ರೀ ಬರಗೂರು ರಾಮಚಂದ್ರಪ್ಪ ಇವರುಗಳು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಕೃಷಿ ಮಾರಾಟ ಇಲಾಖೆಯ ನಿರ್ದೇಶಕರಾದ ಶ್ರೀ ಡಾ: ಮುದ್ದುಮೋಹನ ಇವರು ಅಧ್ಯಕ್ಷತೆ ವಹಿಸಿದ್ದರು.

ಶ್ರೀ ನಿಸಾರ್ ಅಹ್ಮದ್ ಅವರು ಕನ್ನಡದ ಹಿರಿಮೆ ಕುರಿತು ಮಾತನಾಡಿ ತಮ್ಮ ಹೊಸ ಕವನವನ್ನು ವಾಚಿಸಿ, ಕನ್ನಡಾಂಬೆಗೆ ಅರ್ಪಿಸಿದರು.

ಸಾಹಿತಿ ಪ್ರೊ. ಬರಗೂರು ರಾಮಚಂದ್ರಪ್ಪನವರು ಮಾತನಾಡಿ ಕನ್ನಡವನ್ನು ಉಳಿಸಲು , ಬೆಳೆಸಲು ಎಲ್ಲರೂ ಶ್ರಮಿಸಬೇಕು, ಬಾಹ್ಯ ಸ್ವಚ್ಛತೆಯ ಜೊತೆಗೆ ಮಾನಸಿಕ ಸ್ವಚ್ಛತೆಯನ್ನು ಹೊಂದಲು ಕರೆ ನೀಡಿದರು.

ಡಾ: ಮುದ್ದುಮೋಹನ್ ಇವರು ತಮ್ಮ ಅಧ್ಯಕ್ಷ ಬಾಷಣದಲ್ಲಿ ಮುಖ್ಯ ಅತಿಥಿಗಳನ್ನು ಅಬಿನಂದಿಸಿ ಅವರ ಹಿತನುಡಿಗಳನ್ನು ಪಾಲಿಸುವಂತೆ ತಿಳಿಸಿದರು.

ಈ ಸಂದರ್ಭದಲ್ಲಿ ಶ್ರೀ ಶ್ರೀನಿವಾಸ ಉಡುಪ ಹಾಗೂ ಶ್ರೀಮತಿ ಅರ್ಚನಾ ಉಡುಪ ಇವರ ಸುಮಧುರ ಗಾನಗೋಷ್ಠಿಯನ್ನು ಏರ್ಪಡಿಸಲಾಗಿತ್ತು. ಡಾ: ಮುದ್ದುಮೋಹನ್ ಇವರು ಕುವೆಂಪು ಹಾಗೂ ಡಾ: ಜಿ.ಎಸ್. ಶಿವರುದ್ರಪ್ಪ ಇವರ ರಚನೆಗಳನ್ನು

ಸುಮಧುರವಾಗಿ ಹಾಡಿ ಎಲ್ಲರ ಮನ ಸೆಳೆದರು. ನಂತರ ಸಿಬ್ಬಂದಿಯಿಂದ ಮನರಂಜನಾ ಕಾರ್ಯಕ್ರಮ ನಡೆಯಿತು.





ಕೃಷಿ ಮಾರಾಟ ಇಲಾಖೆ, ಮಂಡಳಿ ಹಾಗೂ ಮಾರುಕಟ್ಟೆ ಸಮಿತಿಗಳ ಕನ್ನಡ ಸೃಷ್ಠಿ ಕನ್ನಡ ವತಿಯಿಂದ ದಿನಾಂಕ: 01.11.2014ರಂದು ಕನ್ನಡ ರಾಜ್ಯೋತ್ಸವವನ್ನು ಆಚರಿಸಲಾಯಿತು. ಸಾಹಿತಿಗಳಾದ ಪ್ರೊ: ನಿಸಾರ್ ಅಹ್ಮದ್, ಪ್ರೊ. ಬರಗೂರು ರಾಮಚಂದ್ರಪ್ಪ ಇವರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು.

## 14,400 ಕೋಟಿ ರೂ. ಅಬಕಾರಿ ತೆರಿಗೆ ಸಂಗ್ರಹ ಗುರಿ: ಸಚಿವ ಸತೀಶ್ ಜಾರಕಿಹೊಳಿ

ಬೆಂಗಳೂರು, ನ. 5 (ಕರ್ನಾಟಕ ವಾರ್ತೆ)–

**ಪ್ರಸಕ್ತ ಆರ್ಥಿಕ ವರ್ಷದಲ್ಲಿ 14,400 ಕೋಟಿ ರೂ. ಅಬಕಾರಿ ತೆರಿಗೆ ಸಂಗ್ರಹಿಸುವ ಗುರಿ ಹೊಂದಲಾಗಿದ್ದು, ನಿರೀಕ್ಷಿತ ಗುರಿ ತಲುಪಲಾಗುವುದು ಎಂದು ಅಬಕಾರಿ ಸಚಿವ ಶ್ರೀ ಸತೀಶ್ ಜಾರಕಿಹೊಳಿ ಅವರು ತಿಳಿಸಿದರು.**

**ವಿಧಾನಸೌಧದ ತಮ್ಮ ಕಚೇರಿಯಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು ಕಳೆದ ವರ್ಷ 12,600 ಕೋಟಿ ರೂ. ಅಬಕಾರಿ ತೆರಿಗೆ ಸಂಗ್ರಹಿಸಲಾಗಿತ್ತು ಎಂದು ಹೇಳಿದರು. ನಿರೀಕ್ಷಿತ ಪ್ರಮಾಣದಲ್ಲಿ ಆದಾಯ ಸಂಗ್ರಹವಾಗುತ್ತಿರುವುದರಿಂದ ಇಲಾಖೆಯಲ್ಲಿ ಸೋರಿಕೆ ಪ್ರಮಾಣ ಉದ್ಭವಿಸುವುದಿಲ್ಲ ಎಂದರು.**

**ರಾಜ್ಯದಲ್ಲಿರುವ ಬಾರ್ ಮತ್ತು ರೆಸ್ಟೋರೆಂಟ್‌ಗಳಿಗೆ ಶೇ. 5.5 ರಷ್ಟು ವ್ಯಾಟ್ ವಿಧಿಸಲಾಗಿದ್ದು, ಅದನ್ನು ಹಿಂಪಡೆಯುವ ಸಂಬಂಧ ಮುಖ್ಯಮಂತ್ರಿಗಳೊಂದಿಗೆ ಚರ್ಚಿಸಲಾಗುವುದು. ಮದ್ಯದಂಗಡಿಗಳಿಗೆ ಪರವಾನಗಿ ಸೇರಿದಂತೆ ಇಲಾಖೆಯ ಹಲವು ಆಡಳಿತಾತ್ಮಕ ಪ್ರಕ್ರಿಯೆಗಳು ಜಿಲ್ಲಾಧಿಕಾರಿಗಳ ಮಟ್ಟದಲ್ಲಿಯೇ ನಡೆಯುತ್ತಿವೆ. ಇದರ ಬದಲಾಗಿ, ಅಬಕಾರಿ ಇಲಾಖೆಯ ಜಂಟಿ ಆಯುಕ್ತರಿಂದ ನಡೆಸುವಂತೆಯೂ ಚಿಂತನೆ ನಡೆಸಲಾಗುತ್ತಿದ್ದು, ಕಾನೂನಿನಗೆ ತಿದ್ದುಪಡಿ ತರುವ ಬಗ್ಗೆಯೂ ಸಮಾಲೋಚನೆ ನಡೆಸಲಾಗುವುದು ಎಂದರು.**

**ರಾಜ್ಯ ಶೇ. 95 ರಷ್ಟು ಕಳ್ಳಭಟ್ಟಿ ಮುಕ್ತ ರಾಜ್ಯವಾಗಿದ್ದು, ಕೆಲವು ಜಿಲ್ಲೆಗಳಲ್ಲಿ ಅಲ್ಪ ಪ್ರಮಾಣದ ಕಳ್ಳಭಟ್ಟಿ ವ್ಯವಹಾರಗಳು ನಡೆಯುತ್ತಿರುವುದು ಗಮನಕ್ಕೆ ಬಂದಿದೆ. ಅದನ್ನು ಸದ್ಯದಲ್ಲೇ ಕಡಿವಾಣ ಹಾಕಲು ಕ್ರಮ ಕೈಗೊಳ್ಳಲಾಗುವುದು ಎಂದು ಸಚಿವರು. ಅಬಕಾರಿ ಇಲಾಖೆಯಲ್ಲಿ ಸುಮಾರು ಎರಡು ಸಾವಿರ ವಿವಿಧ ಶ್ರೇಣಿಗಳ ಹುದ್ದೆಗಳು ಖಾಲಿ ಇದ್ದು, 1500 ಹುದ್ದೆಗಳ ಭರ್ತಿಗೆ ಹಣಕಾಸು ಇಲಾಖೆ ಈಗಾಗಲೇ ಅನುಮತಿ ನೀಡಿದೆ. 1353**

ಅಬಕಾರಿ ರಕ್ಷಕರು, 440 ಉಪ ನಿರೀಕ್ಷಕರು ಹಾಗೂ 250ಕ್ಕೂ ಹೆಚ್ಚು ವಾಹನ ಚಾಲಕ ಹುದ್ದೆಗಳು ಖಾಲಿ ಇದ್ದು, ಈ ಹುದ್ದೆಗಳ ಭರ್ತಿಗೆ ಕ್ರಮ ಕೈಗೊಳ್ಳಲಾಗುವುದು ಎಂದು ನುಡಿದರು.

ಮದ್ಯದಂಗಡಿಗಳಿಗೆ ಪರವಾನಗಿ ನೀಡುವಾಗ ಪರಿಶಿಷ್ಟ ಜಾತಿ ಮತ್ತು ವರ್ಗದವರಿಗೆ ಮೀಸಲಾತಿ ಸೌಲಭ್ಯ ಕಲ್ಪಿಸಬೇಕು ಎಂದು ವಿಧಾನಮಂಡಲದ ಅನುಸೂಚಿತ ಜಾತಿ ಮತ್ತು ಪಂಗಡಗಳ ಸಮಿತಿ ಅಧ್ಯಕ್ಷ ಪಿ.ಎಂ. ನರೇಂದ್ರ ಸ್ವಾಮಿ ಅವರು ಒತ್ತಾಯಿಸಿದ್ದಾರೆ. ಈ ಕುರಿತೂ ಸಹ ಮುಖ್ಯಮಂತ್ರಿಗಳೊಂದಿಗೆ ಚರ್ಚಿಸಿ ತೀರ್ಮಾನಿಸಲಾಗುವುದು ಎಂದರು.

ಬೆಳಗಾವಿಯಲ್ಲಿ ಮುಂದಿನ ದಿನಗಳಲ್ಲಿ ನಡೆಯುವ ವಿಧಾನ ಮಂಡಲದ ಅಧಿವೇಶನದ ದಿನಾಂಕರ ನಿಗದಿಯಾದ ತಕ್ಷಣ ಪೂರ್ವ ಸಿದ್ಧತೆ ಮಾಡಿಕೊಳ್ಳಲಾಗುವುದು ಎಂದು ಬೆಳಗಾವಿ ಜಿಲ್ಲಾ ಉಸ್ತುವಾರಿ ಸಚಿವರೂ ಆಗಿರುವ ಶ್ರೀ ಸತೀಶ್ ಜಾರಕಿಹೊಳಿ ಅವರು ತಿಳಿಸಿದರು.

## ನಿರ್ಮಾಪಕ ಎ.ಆರ್. ರಾಜು ನಿಧನಕ್ಕೆ ವಾರ್ತಾ ಸಚಿವರ ಸಂತಾಪ

ಬೆಂಗಳೂರು, ನವೆಂಬರ್ 5 (ಕರ್ನಾಟಕ ವಾರ್ತೆ)

ನಿರ್ಮಾಪಕ ಎ.ಆರ್. ರಾಜು ನಿಧನಕ್ಕೆ ಮೂಲ ಸೌಕರ್ಯ ಅಭಿವೃದ್ಧಿ ಹಜ್, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಸಚಿವ ಶ್ರೀ ಆರ್. ರೋಷನ್‌ಬೇಗ್ ಅವರು ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ.

ಕನ್ನಡದ ಯಶಸ್ವಿ ಚಿತ್ರಗಳಾದ ಸಹೋದರರ ಸವಾಲ್, ವಿಜಯ್‌ವಿಕ್ರಂ, ಸಾಹಸಸಿಂಹ ಮುಂತಾದ 35 ಕ್ಕೂ ಹೆಚ್ಚು ಚಿತ್ರಗಳನ್ನು ನಿರ್ಮಿಸಿದ ರಾಜು ಅವರು 5 ದಶಕಗಳ ಕಾಲ ಚಿತ್ರ ವಿತರಕರಾಗಿ, ನಿರ್ಮಾಪಕರಾಗಿ ಸೇವೆ ಸಲ್ಲಿಸಿದ್ದಾರೆ. ಅವರ ಅಗಲಿಕೆಯು ಚಿತ್ರರಂಗಕ್ಕೆ ತುಂಬಲಾದ ನಷ್ಟವಾಗಿದೆ ಎಂದು ಸಚಿವರು ಶೋಕ ಸಂದೇಶದಲ್ಲಿ ತಿಳಿಸಿದ್ದಾರೆ.

ಆರ್‌ಕೆಎಸ್/ಸಮ/ಕೆಎಂ